

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಘಾಸಿಗೊಳಿಸುವ ಗಾಸಿಪ್‌ಗಳು

ಕಡೂರು ಮತ್ತು ಚಿಕ್ಕಮಗಳೂರು ಮಧ್ಯೆ ಇರುವ ಒಂದು ದೊಡ್ಡ ಊರು ಮತ್ತು ಹೋಬಳಿ ಕೇಂದ್ರ. ಅದರ ಹೆಸರು ಸಖರಾಯಪಟ್ಟಣ. ಜನರ ಬಾಯಲ್ಲಿ ಈಗ ಅದು 'ಸಕ್ರೆಪಟ್ನ' ಆಗಿದೆ. ಸಕ್ಕರೆಗೂ ಈ ಊರಿಗೂ ಯಾವ ಸಂಬಂಧವೂ ಇಲ್ಲ. ಅದರೂ ನೋಡುವವರ ಕಣ್ಮನಗಳನ್ನು ತಣಿಸುವ ಪ್ರಕೃತಿಯ ಸೊಬಗಿನಿಂದ ಕೂಡಿದ ತಾಣವಿದು. ಅನೇಕ ರಾಜರು ಮತ್ತು ಪಾಳೆಗಾರರು ಆಳಿದ ಪ್ರಾಂತ್ಯ. ಇಲ್ಲಿರುವ ಅಯ್ಯನ ಕೆರೆ ಹಿಂದಿನ ರಾಜಮಹಾರಾಜರುಗಳ ಆಳ್ವಿಕೆಯಲ್ಲಿ ಜನಸಾಮಾನ್ಯರ ಬದುಕಿನ ಬಗ್ಗೆ ಇದ್ದ ಕಾಳಜಿಯ ಪ್ರತೀಕ. ಒಂದು ಕಾಲದಲ್ಲಿ ಸುತ್ತ ದಟ್ಟವಾದ ಕಾಡು. ಮೈಸೂರು ಮಹಾರಾಜರು ವರ್ಷದಲ್ಲಿ ಒಂದೆರಡು ಬಾರಿಯಾದರೂ ಹುಲಿ ಬೇಟೆಯಾಡಲು ಇಲ್ಲಿಗೆ ಬರುತ್ತಿದ್ದರು. ಬೇಟೆಯಾಡಿದ ಭಾರೀ ಹುಲಿಯೊಂದಿಗೆ ಬೇಟೆ ಉಡುಗೆಯಲ್ಲಿ ಇರುವ ಬಂದೂಕುಧಾರಿಯಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರ ಈ ಭಾಗದ ಅನೇಕ ಶಿಷ್ಯರ ಮನೆಗಳಲ್ಲಿ ಈಗಲೂ ರಾರಾಜಿಸುತ್ತಿವೆ.

ಮಾರ್ಚ್ 31 ರಂದು ಚಿಕ್ಕಮಗಳೂರಿನಲ್ಲಿ ನಮ್ಮ ಒಂದು ಕಾರ್ಯಕ್ರಮವಿತ್ತು. ಅಲ್ಲಿಗೆ ಬರುವ ವಿಷಯ ತಿಳಿದ ಸಖರಾಯಪಟ್ಟಣ ಮತ್ತು ಸುತ್ತಮುತ್ತಲ ಹಳ್ಳಿಗಳ ಶಿಷ್ಯರು ಕೆಲವರು ಹಿಂದಿನ ದಿನ ಕಡೂರು ಪ್ರಾಂತ್ಯದಲ್ಲಿ ಸಂಚರಿಸುತ್ತಿದ್ದ ನಮ್ಮನ್ನು ಭೇಟಿಯಾಗಿ ಅದೇ ಮಾರ್ಗವಾಗಿ ಹೋಗಲಿರುವುದರಿಂದ ತಮ್ಮ ಊರಿನ ಬಳಿ ಸ್ವಾಗತಿಸಿ ಬೀಳ್ಕೊಡುವುದಾಗಿ ವಿನಂತಿಸಿಕೊಂಡರು. ಅವರ ಆ ಉತ್ಸಾಹಕ್ಕೆ ಗುರುಗಳ ಮೇಲಿನ ಭಕ್ತಿ ಒಂದು ಕಾರಣವಾದರೆ ಇನ್ನೊಂದು ವಿಶೇಷ ಕಾರಣವಿತ್ತು. ಕಡೂರಿನಿಂದ ಚಿಕ್ಕಮಗಳೂರುವರೆಗೆ ಇದ್ದ ಸಿಮೆಂಟು ರಸ್ತೆ ಹಳೆಯದಾಗಿದ್ದು ತಗ್ಗುಗುಂಡಿಗಳು ಬಿದ್ದು ತುಂಬಾ ಕೆಟ್ಟುಹೋಗಿತ್ತು. ಆ ರಸ್ತೆಯಲ್ಲಿ ಪ್ರಯಾಣ ಮಾಡುವಾಗಲೆಲ್ಲಾ ಇನ್ನೆಂದೂ ಅತ್ತ ತಲೆಹಾಕಿ ಮಲಗಬಾರದೆನ್ನುವಷ್ಟು ಮನಸ್ಸು ರೋಸಿಹೋಗಿತ್ತು. ಆ ಭಾಗದ ಕಾರ್ಯಕ್ರಮಗಳೆಂದರೆ ಒಂದು ರೀತಿಯ 'ಸುಸಂಸ್ಕೃತ ಶಿಕ್ಷೆ' ಎನಿಸಿತ್ತು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭು, ಪ್ರಜಾಪ್ರತಿನಿಧಿಗಳು ಸೇವಕರು ಮಾತ್ರ ಎಂದು ವ್ಯಾಖ್ಯಾನಿಸುತ್ತಾರೆ. ಆದರೆ ನಮ್ಮ ದೇಶದ ಪ್ರಜಾಪ್ರಭುತ್ವದಲ್ಲಿ 'ಸೇವಕ'ರಿಗೇ ಹೆಚ್ಚು ಮನ್ನಣೆ 'ಪ್ರಭು'ಗಳಿಗೆ ಇಲ್ಲ. ಅಪರೂಪಕ್ಕೆ ನಂಟರು ಮನೆಗೆ ಬಂದಾಗ ಆದರಾತಿಥ್ಯ ಮಾಡುವಂತೆ ಯಾವಾಗಲಾದರೊಮ್ಮೆ ಮಂತ್ರಿಮಹೋದಯರು ಬಂದಾಗ ಮಾತ್ರ ನಮ್ಮ ದೇಶದ ರಸ್ತೆಗಳು ಸಿಂಗಾರಗೊಳ್ಳುತ್ತವೆ! ನಿತ್ಯ ಓಡಾಡುವ ಜನರ ಕಣ್ಣಲ್ಲಿ ಧೂಳು, ಪಕ್ಕೆಲುಬುಗಳ ಮುರಿತ! ಆದರೂ ನಮ್ಮ ಹಳ್ಳಿಯ ಜನರು ಮಾತ್ರ ಸಭೆ ಸಮಾರಂಭಗಳಲ್ಲಿ ಈ ರಾಜಕೀಯ ಧುರೀಣರಿಗೆ ಶಾಲು ಹೊದಿಸಿ ಹಾರತುರಾಯಿ ಕೊಟ್ಟು ಸನ್ಮಾನ ಮಾಡುವ ಸೌಜನ್ಯ ಬಿಟ್ಟಿಲ್ಲ. ಮಂತ್ರಿಮಹೋದಯರು ಸಮಾರಂಭಕ್ಕೆ ಬರದೇ ಇದ್ದರೂ ಅವರನ್ನು ಸ್ವಾಗತಿಸುವುದಾಗಿ ಹೇಳುವ ಹೃದಯವಂತಿಕೆ ನಮ್ಮ ಜನರದು. ಈ ಹಿನ್ನೆಲೆಯಲ್ಲಿ ಮಂತ್ರಿಪದವಿಗಾಗಿ ಆಸೆಪಟ್ಟು ದಿಲ್ಲಿಗೆ ಹೆಚ್ಚು ದೌಡಾಯಿಸದೆ ಜನಸೇವೆ ಮಾಡಿ ಪುಣ್ಯಕಟ್ಟಿಕೊಳ್ಳಬೇಕೆಂದು ಈ ಭಾಗದ ಸಮಾರಂಭವೊಂದರಲ್ಲಿ ಈ ಹಿಂದೆ ಶಾಸಕ ಸಿ.ಟಿ ರವಿಗೆ ಹೇಳಿದ ಕಿವಿಮಾತು ಫಲಕಾರಿಯಾಗಿತ್ತು.




ಈಗ ಸುಮಾರು 27 ಕೋಟಿ ರೂ. ಗಳ ವೆಚ್ಚದಲ್ಲಿ ಕಡೂರು-ಚಿಕ್ಕಮಗಳೂರು ರಸ್ತೆ ಕೆಲಸ ಮುಗಿದಿದೆ. ಆ ಸಂಭ್ರಮದಲ್ಲಿ ಹಳ್ಳಿಯ ಜನರು ನಮ್ಮನ್ನು ಒಪ್ಪಿಸಿಕೊಂಡಿದ್ದರು. ಸಖರಾಯಪಟ್ಟಣದ ಬಳಿ ಬಂದಾಗ ಕಾರಿನಲ್ಲಿಯೇ ಕುಳಿತು ಹಾರ ಸ್ವೀಕರಿಸಿ ಮುಂದೆ ತೆರಳಬಹುದು, ಹೆಚ್ಚಿನ ಸಮಯದ ಅಗತ್ಯವಿಲ್ಲವೆಂದು ಹೇಳಿದ್ದರು. ಊರ ಬಳಿಗೆ ಬಂದಾಗ ಜನರು ಅತಿ ಉತ್ಸಾಹದಿಂದ ಬರಮಾಡಿಕೊಂಡರು. ಪಟಾಕಿಗಳನ್ನು ಸಿಡಿಸಿ ಕೇಕೆ ಹೊಡೆದರು. ನೂರಾರು ಮಹಿಳೆಯರು ತಲೆಯ ಮೇಲೆ ಪೂರ್ಣಕುಂಭ ಹೊತ್ತು ಸ್ವಾಗತಕ್ಕೆ ನಿಂತಿದ್ದರು. ಜನರ ಮಧ್ಯೆ ಶಾಸಕ ಸಿ.ಟಿ ರವಿ ಸಹ ಕೈಯಲ್ಲಿ ಹಾರ ಹಿಡಿದು ಸ್ವಾಗತಿಸಲು ನಿಂತಿದ್ದರು. ಕಾರಿನಿಂದ ಇಳಿದು ಗೌರವ ಸ್ವೀಕರಿಸಬೇಕೆಂದು ಒತ್ತಾಯಿಸದಿದ್ದರೂ ಅಷ್ಟೊಂದು ಜನರನ್ನು ಕಾಲ್ನಡಿಗೆಯಲ್ಲಿ ನಡೆಸಿಕೊಂಡು ಕಾರಿನಲ್ಲಿ ಕುಳಿತುಕೊಳ್ಳಲು ನಮಗೆ ಮನಸ್ಸಾಗಲಿಲ್ಲ. ಕೆಳಗೆ ಇಳಿಯುತ್ತಿದ್ದಂತೆಯೇ ಜನರಿಗಾದ ಸಂತೋಷಕ್ಕೆ ಪಾರವಿಲ್ಲ. ಜಯಘೋಷ ಮಾಡುತ್ತಿದ್ದ ಭಕ್ತಸಮೂಹದೊಂದಿಗೆ ಊರ ಹೊರವಲಯದವರೆಗೆ ಕಾಲ್ನಡಿಗೆಯಲ್ಲಿಯೇ ಮುಂದೆ ಪ್ರಯಾಣ. ಅದೊಂದು ಪೂರ್ವ ಯೋಜಿತವಲ್ಲದ ದಿಢೀರ್ ಕಾರ್ಯಕ್ರಮ; ಯಾವ ಆಹ್ವಾನ ಪತ್ರಿಕೆ ಇಲ್ಲ, ಮೈಕಿಲ್ಲ, ಪೆಂಡಾಲು ಇಲ್ಲ, ಬ್ಯಾನರ್‌ಗಳಿಲ್ಲ, ಅತಿಥಿಗಳಿಲ್ಲ, ಸಮಾರಂಭವಿಲ್ಲ, ಭಾಷಣಗಳಿಲ್ಲ.

ಶಿಷ್ಯರು ತೋರಿದ ಭಕ್ತಿಭಾವಕ್ಕೆ ಮನಸೋತು ಚಿಕ್ಕಮಗಳೂರಿಗೆ ಪ್ರಯಾಣ ಬೆಳೆಸಿದ ಕೆಲವೇ ಗಂಟೆಗಳಲ್ಲಿ ಅನೇಕರಿಂದ ಆತಂಕದ ಮೊಬೈಲ್ ಫೋನುಗಳ ಕರೆ. ದೂರದರ್ಶನದ ಒಂದು ಚಾನಲ್‌ನಲ್ಲಿ ಈ ಮುಂದಿನಂತೆ ಸುದ್ದಿ ಪ್ರಸಾರವಾಗಿತ್ತು: "ಸಖರಾಯಪಟ್ಟಣದ ಬಳಿ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಘರ್ಷಣೆ. ಬೇಸರಗೊಂಡ ಸಿರಿಗೆರೆಯ ಗುರುಗಳಿಂದ ರಸ್ತೆ ಉದ್ಘಾಟನೆ ಮಾಡಲು ನಿರಾಕರಣೆ"! ದಿನನಿತ್ಯವೂ ಮಾಧ್ಯಮಗಳು

ಇಂಥ ಗಾಸಿಪ್‌ಗಳನ್ನು ಬಿತ್ತುತ್ತಾ ಹೋಗುತ್ತವೆ. ಜನರೂ ಸಹ ಅವುಗಳನ್ನು ಬಾಯಿ ಚಪ್ಪರಿಸಿಕೊಂಡು ನೋಡುತ್ತಾರೆ. ದೂರದರ್ಶನಗಳು ಇಂಥ ಅರೆಬೆಂದ ಸುದ್ದಿಗಳನ್ನು ಉದ್ದೇಶಪೂರ್ವಕವಾಗಿ ಬಿತ್ತುತ್ತವೆಯೋ, ಜನರ ಗಾಸಿಪ್ ಹಸಿವನ್ನು ತಣಿಸಲು ಅವುಗಳಿಗೆ ಗಾಸಿಪ್‌ಗಳ ಅಗತ್ಯವಿದೆಯೋ ಹೇಳುವುದು ಕಷ್ಟ! ಅದೊಂದು ಅಧಿಕೃತವಾದ ಉದ್ಘಾಟನಾ ಕಾರ್ಯಕ್ರಮವಾಗಿರಲಿಲ್ಲ, ಮೆರವಣಿಗೆಯ ಮುಂಭಾಗದಲ್ಲಿ ದೂರದಲ್ಲೆಲ್ಲೋ ಕೆಲವರು ವಾಗ್ವಾದ ನಡೆಸುವುದು ಅಸ್ಪಷ್ಟವಾಗಿ ಕೇಳಿಬರುತ್ತಿತ್ತು. ಮುಂದೆ ವಿಧಿವತ್ತಾಗಿ ಗುರುಗಳನ್ನು ಕರೆಸಿ ಅದ್ದೂರಿಯಾಗಿ ಉದ್ಘಾಟನೆ ಮಾಡಿಸಬೇಕೆಂದು ಕೆಲವರು, ಅಷ್ಟು ಹೊತ್ತಿಗೆ ರಸ್ತೆ ಹಳೆಯದಾಗುತ್ತದೆ ಈಗಲೇ ಗುರುಗಳಿಂದ ರಸ್ತೆಗೆ ಹೂವು ಹಾಕಿಸಬೇಕೆಂದು ಮತ್ತೆ ಕೆಲವರು. ಗುರುಗಳು ರಸ್ತೆಗೆ ಹೂವನ್ನು ಹಾಕಲಿ ಬಿಡಲಿ, ಹೂವಿನ ಮೇಲೆ ಸರಾಗವಾಗಿ ನಡೆದುಕೊಂಡು ಹೋಗುವಂತಹ ಒಳ್ಳೆಯ ರಸ್ತೆಯಂತೂ ನಿರ್ಮಾಣವಾಗಿದೆ. ಜನರ ಖುಷಿಯನ್ನು ಬಿಂಬಿಸುವ ಮೆರವಣಿಗೆಯನ್ನು ದೊಡ್ಡ ಸುದ್ದಿಯನ್ನಾಗಿ ಮಾಡದೆ ಜನರ ಮನಸ್ಸನ್ನು ಕಲುಷಿತಗೊಳಿಸುವ ರೀತಿಯಲ್ಲಿ sensational news ಮಾಡುವುದು ತುಂಬಾ ವಿಷಾದನೀಯ.

ರಷ್ಯಾ ದೇಶದಲ್ಲಿ ಕಮ್ಯುನಿಸ್ಟ್ ಸರಕಾರವಿದ್ದಾಗ Pravda ಮತ್ತು Izvestia ಎಂಬ ಸರಕಾರೀ ಸ್ವಾಮ್ಯದ ಎರಡು ಪ್ರಮುಖ ಪತ್ರಿಕೆಗಳು ಇದ್ದವು. ರಷ್ಯನ್ ಭಾಷೆಯಲ್ಲಿ 'ಪ್ರಾವ್ಡಾ' ಎಂದರೆ 'ಸತ್ಯ', 'ಇಜ್‌ವೆಸ್ತಿಯಾ' ಎಂದರೆ 'ಸುದ್ದಿ'. Pravda (ಸತ್ಯ) ಪತ್ರಿಕೆಯಲ್ಲಿ ಸುದ್ದಿ ಇರುವುದಿಲ್ಲ, Izvestia (ಸುದ್ದಿ) ಪತ್ರಿಕೆಯಲ್ಲಿ ಸತ್ಯ ಇರುವುದಿಲ್ಲ ಎಂದು ಅಮೇರಿಕನ್ನರು ವಿಡಂಬನೆ ಮಾಡುತ್ತಿದ್ದರು. ಸುದ್ದಿ ಪತ್ರಿಕೆಯಾದ 'ಇಜ್‌ವೆಸ್ತಿಯಾ' ಈಗ ನಿಂತುಹೋಗಿದೆ. 'ಸತ್ಯಮೇಯ ಜಯತೇ' ಎನ್ನುವಂತೆ ಸತ್ಯ ಪತ್ರಿಕೆಯಾದ 'ಪ್ರಾವ್ಡಾ' ಮಾತ್ರ ಈಗಲೂ ಅಸ್ತಿತ್ವದಲ್ಲಿದೆ. ಸತ್ಯಕ್ಕೆ ಆಕರ್ಷಣೆ ಕಡಿಮೆ. ಸುಳ್ಳಿಗೆ ಆಕರ್ಷಣೆ ಹೆಚ್ಚು. ಜನರನ್ನು ಆಕರ್ಷಿಸುವ ಶಕ್ತಿ ಸುಳ್ಳಿಗಿಂತ ಸತ್ಯಕ್ಕೆ ಖಂಡಿತಾ ಇದೆ. ಆದರೆ ಜನರು ಸತ್ಯಕ್ಕಿಂತ ಅರೆಬರೆ ಸತ್ಯಕ್ಕೆ, ಸುಳ್ಳಿಗೆ ಬಹುಬೇಗ ಮಾರುಹೋಗುತ್ತಾರೆ. ಜನರ ಈ ದೌರ್ಬಲ್ಯವನ್ನು ದೂರದರ್ಶನದ ಚಾನಲ್‌ಗಳು ತಮ್ಮ TRP ಹೆಚ್ಚಿಸಿಕೊಳ್ಳಲು ನಗದೀಕರಿಸಿಕೊಳ್ಳುತ್ತವೆ.

ಜನರೂ ಸಹ ಮತ್ತೊಬ್ಬರ ವ್ಯಕ್ತಿಗತ ಜೀವನದಲ್ಲಿ ಇಣುಕಿ ನೋಡುವ, ಮೂಗುತೂರಿಸುವ, ನಾಲಗೆಯ ನವೆಯನ್ನು ತೀರಿಸಿಕೊಳ್ಳುವ ಸ್ವಭಾವವುಳ್ಳವರು. 'ಮನೆ ಬಿಟ್ಟು ಹೋದ ಹೆಂಡತಿಯನ್ನು ಮತ್ತೆ ಮನೆಗೆ ಸೇರಿಸಲು ನಾನೇನು ಶ್ರೀರಾಮನಲ್ಲ' ಎಂಬ ಅಗಸನ ಬಾಯಿ ಚಪಲದ ಮಾತಿಗೆ ಶ್ರೀರಾಮ ಎಂತಹ ನೋವನ್ನು ಅನುಭವಿಸಬೇಕಾಯಿತು. ಸೀತೆ ಎಂತಹ ಪಡಿಪಾಟಲು ಪಡಬೇಕಾಯಿತು. 'ಕರುಣಾಳು ರಾಘವನಲ್ಲಿ ಕುಂದಿಲ್ಲ, ಹೆಣ್ಣಾಗಿ ಹುಟ್ಟಿದ್ದು ನನ್ನದೇ ತಪ್ಪು!' ಎನ್ನುತ್ತಾಳೆ ಸೀತೆ (ಲಕ್ಷ್ಮೀಶ ಕವಿಯ ಜೈಮಿನಿ ಭಾರತ). ತುಂಬುಗರ್ಭಿಣಿ ಸೀತೆ ಕಾಡಿನಲ್ಲಿ ಪಡಿಪಾಟಲು ಪಡುತ್ತಿದ್ದರೆ ಅಯೋಧ್ಯೆಯಲ್ಲಿ ಶ್ರೀರಾಮ ಅರಮನೆಯಲ್ಲಿದ್ದರೂ ಕಾಡಿನಲ್ಲಿದ್ದಂತೆ ಸಾತ್ವಿಕ ಜೀವನ ನಡೆಸುತ್ತಿದ್ದನಂತೆ! ದರ್ಭಾಸನದ ಮೇಲೆ ಮಲಗುತ್ತಿದ್ದನಂತೆ! ಮೃಷ್ಟಾನ್ನಗಳನ್ನು ತ್ಯಜಿಸಿ ಕಂದಮೂಲಗಳನ್ನು ತಿನ್ನುತ್ತಿದ್ದನಂತೆ!

Gossip is the Devil's radio ಎಂಬ ಮಾತೊಂದು ಆಂಗ್ಲಭಾಷೆಯಲ್ಲಿದೆ. ಈಗ ಅದನ್ನು ಬದಲಾಯಿಸಿ Gossip is the Devil's Television! ಎಂದು ಹೇಳಬಹುದೆಂದು ತೋರುತ್ತದೆ. ಕತ್ತಿಗಿಂತ ನಾಲಿಗೆ ತುಂಬಾ ಹರಿತ. ಅದರಿಂದ ಇನ್ನೊಬ್ಬರನ್ನು ಇರಿದು ಘಾಸಿಗೊಳಿಸುವುದು ಬೇಡ.

5.4.2012

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑